

# ಕಾಯುತಿರುವೆ

ಕೊನೆಯಿಲ್ಲದ ಬದುಕ ಸಂತೆಯಲಿ
ಚಿಂತೆಯಿಲ್ಲದೇ ಕುಳಿತಿರುವೆ
ಕಾಲು ಮರಗಟ್ಟಿ ಕಾಯ ಥರಗುಟ್ಟಿದರೂ
ಕಾಯುತಿರುವೆ ಶಬರಿಯಂತೆ.

ಕಣ್ಣ ರೆಪ್ಪೆ ಬದುವಿನಲ್ಲಿ
ಉಪ್ಪು ನೀರು ಹೆಪ್ಪುಗಟ್ಟಿದರೂ
ಗಟ್ಟಿಗಿತ್ತಿ ನಾ ಕಾಯುತಿರುವೆ
ಮಾಲ್, ಮಲ್ಟಿಪ್ಲೆಕ್ಸ್, ಸೂಪರ್ ಸ್ಟೋರ್‌ಗಳ
ಅಬ್ಬರದ ನಡುವೆಯೂ
ನನ್ನ ಅಂಗಡಿಯ ಹುಡುಕಿ
ಬರುವ ಗಿರಾಕಿಗಳಿಗೆ.

ಗೂಡು ತೊರೆದ ಮರಿಹಕ್ಕಿಗಳೆಲ್ಲ
ಮತ್ತೆ ಹೊರಳಿ ಮಮತೆಯ ಮಡಿಲಿಗೆ
ಮರಳಿ ಬರುವರೆಂದು.

ಮಾಗಿ ತೂಗಿಬಿದ್ದ ಕೆನ್ನೆಗಳ
ಪುಟ್ಟ ಗೂಡಂಗಡಿಯೊಡತಿ
ಸುಕ್ಕುಗಟ್ಟಿದ ಮುಪ್ಪಡರಿದ ಜೀವದ
ಗುಳಿಬಿದ್ದ ನನ್ನೀ ಕಣ್ಣುಗಳೀಗ
ಬಿಟ್ಟುಹೋದವರು ಮತ್ತೆ ಬರುವರೆಂದು
ದಾರಿಯ ನಿರುಕಿಸುವುದೇ ನಿತ್ಯದ ಕಾಯಕ.

ಸೋತು ಸುಣ್ಣವಾಗಿ ಸಿಹಿ ಹಣ್ಣಾದ
ಮೈಮನಕೆ ಎಣ್ಣೆಬೆಣ್ಣೆಗೆ ಕಣ್ಣಾಗುವವರ...
ಮಣ್ಣಾಗುವ ಮುನ್ನಿನಾ ಬಣ್ಣದ ಕನಸು
ಭರಣಿಗಳಿಂದ ಹೊರಗಿಣುಕುವ ಸರಕುಗಳಂತೆ.

● **ಇಂದಿರಾ ಮೋಟೆಬೆನ್ನೂರ**

# ನಿರೀಕ್ಷೆ

ಕಾನನದ ಮೂಲೆಯಲಿ
ಕಾದಿದ್ದಳು ಶಬರಿ
ರಾಮ ಬರುವನೆಂದು

ಕಾಯಕೆ ಬಂದಿತ್ತು ಮುಪ್ಪು
ಮನಸ್ಸಿಗೆ ಮಾತ್ರ ಇರಲಿಲ್ಲ
ನಾನು ಕಾಯುತ್ತಿರುವೆ ಹೀಗೆ
ಕೊಳ್ಳುವವರು ಬರುವರೆಂದು

ತಿಂಡಿಯ ಡಬ್ಬ, ಉಂಡೆಯ ಡಬ್ಬ
ತುಂಬಿದೆ ಅಂಗಡಿಯೊಳಗೆ
ಪುಟಾಣಿ ಮಕ್ಕಳ ಚಾಕ್ಲೇಟ್–ಬಿಸ್ಕೆಟ್
ಗರಿಗರಿ ಚಕ್ಕುಲಿ ಕುರುಕುರೆ

ತಿನ್ನುವ ಬಾಯಿ ನಿಮಗಿರಲಿ
ಮಾರುವ ಸಡಗರ ನನಗಿರಲಿ
ಕೊಂಡು ರುಚಿ ನೋಡಿ ಸಾಕು
ಹಾಕಬೇಡಿ ನಿಮ್ಮ ನಾಲಿಗೆಗೆ ಬ್ರೇಕು

ಕೈಕಾಲುಗಳು ಸುಕ್ಕುಗಟ್ಟಿದರೆ ಏನು
ಮನಸ್ಸಿಗೆ ಸುಕ್ಕು ಬಂದಿಲ್ಲ
ಕಣ್ಣಿನ ದೃಷ್ಟಿ ಇನ್ನೂ ಕುಂದಿಲ್ಲ
ನಾಳೆ ಬರುವಿರೆಂಬ ನಿರೀಕ್ಷೆ

ಇಂದಿನ ದಿನವ ಕಳೆಗಟ್ಟಿಸಿದೆ
ಹೊಟ್ಟೆ ತುಂಬಿಸುವ ಈ ಕಾಯಕ
ನಡೆಯಲಿದೆ ಕೊನೆಯ ಉಸಿರಿನ ತನಕ.

● **ಮಮತಾ ಕೆ. ಮೂರ್ತಿ**